ಎಲ್ಲ ಪುಸ್ತಕಗಳಲ್ಲಿಯೂ ಹಲವು ಭಿನ್ನಾಭಿಪ್ರಾಯಗಳನ್ನು ಹೇಳಲು ಆಮೂರರಿಗೆ ಸಾಧ್ಯವಾಗಿದೆ. ಅವರಲ್ಲಿ ವಿನಯ ಮತ್ತು ದಿಟ್ಟತನ ಎರಡೂ ಇದ್ದವು. ಅದನ್ನೇ ಪ್ರೀತಿ ಮತ್ತು ನಿರ್ಭೀತಿ ಎಂದೂ ಕರೆಯಬಹುದು. ಇಂಥ ಕೃತಿಗಳೊಂದಿಗೆ ವಾಗ್ವಾದ, ಸಂವಾದ ಮಾಡಬಹುದು. ಆದರೆ, ಅವುಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಆಕರ್ಷಕವಾಗಿ ಬರೆಯಬೇಕೆಂಬ ಹಂಬಲವೂ ಅವರದಾಗಿರಲಿಲ್ಲ. ಬರವಣಿಗೆ ಮತ್ತು ಮಾತು ಎರಡರಲ್ಲೂ ವಾಗ್ವೈಭವ ಆಮೂರರ ಆಯ್ಕೆಯಾಗಿರಲಿಲ್ಲ. ಬದಲಾಗಿ ಅವರು ಖಚಿತತೆ ಮತ್ತು ವಿಶದತೆಗಳಿಗೆ ಒಲಿದವರು. ಮೇಲೆ ಹೇಳಿರುವ ಸಂಗತಿಗಳು ಅವರ ಬರವಣಿಗೆಯ ವಿಶಿಷ್ಟತೆಯನ್ನು ರೂಪಿಸಿದವು. ಆತ್ಮವಿಶ್ವಾಸ, ಅನ್ಯಕ್ಕೆ ತೆರೆದುಕೊಳ್ಳುವ ಮುಕ್ತತೆ ಮತ್ತು ಹತೋಟಿಯಲ್ಲಿ ಇರುತ್ತಿದ್ದ ಭಾವನಾತ್ಮಕತೆಯು ಅವರ ಸ್ವಭಾವದ ಮತ್ತು ಬರವಣಿಗೆಯ ಲಕ್ಷಣಗಳು.

1925 ಹಾವೇರಿ ಜಿಲ್ಲೆಯ ಬೊಮ್ಮನಹಳ್ಳಿಯಲ್ಲಿ ಹುಟ್ಟಿದ ಆಮೂರರು ಮೇಧಾವಿ ವಿದ್ಯಾರ್ಥಿ, ಸಮರ್ಥ ಅಧ್ಯಾಪಕ ಮತ್ತು ಕೊನೆಯವರೆಗೂ ಶಿಸ್ತುಬದ್ಧವಾದ ದುಡಿಮೆಯಲ್ಲಿ ತೊಡಗಿಕೊಂಡ ವಿದ್ವಾಂಸ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷಿನಲ್ಲಿ ಎಂ.ಎ. ಪದವಿ ಪಡೆದು 1963ರಲ್ಲಿ **'The Concept of Comedy: A Restatement'** ಎಂಬ ವಿಷಯದ ಬಗ್ಗೆ ಪಿಎಚ್.ಡಿ. ಪದವಿ ಪಡೆದರು. ಜಾಗತಿಕ ಮನ್ನಣೆ ಪಡೆದ ಮಹಾಪ್ರಬಂಧದ ಹಲವು ಅಧ್ಯಾಯಗಳು ಜರ್ಮನ್ ಭಾಷೆಗೂ ಅನುವಾದವಾಗಿವೆ. ಫುಲ್‌ಬ್ರೈಟ್ ಸೀನಿಯರ್ ಸ್ಕಾಲರ್ ಫೆಲೋಶಿಪ್ ಪಡೆದು ಅಮೆರಿಕಾದ ಯೇಲ್ ವಿಶ್ವವಿದ್ಯಾಲಯ ಮತ್ತು ಸಾಂತಾ ಬಾರ್ಬರಾ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿದ ಆಮೂರರು ಬ್ರಿಟಿಷ್ ಕೌನ್ಸಿಲ್ ಅನುದಾನದಿಂದ ಇಂಗ್ಲೆಂಡಿನಲ್ಲೂ ಸಂಶೋಧನೆ ಮಾಡಿದರು. ಈ ಅನುಭವದಿಂದ ಸಂಶೋಧನೆಯ ವಿಧಾನಗಳನ್ನು ನಿಖರವಾಗಿ ಗ್ರಹಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮತ್ತು ಔರಂಗಾಬಾದಿನ ಮರಾಠವಾಡ ವಿಶ್ವವಿದ್ಯಾಲಯದಲ್ಲಿ ಮೂವತ್ತಾರು ವರ್ಷ ಕಲಿಸುವಿಕೆ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡು ನಿಷ್ಠುರವಾದ ಅಕಡೆಮಿಕ್ ಮನೋಧರ್ಮವನ್ನು ಬೆಳೆಸಿಕೊಂಡರು. ಸಂಪಾದಿತ ಕೃತಿಗಳು ಮತ್ತು ಅನುವಾದಗಳೂ ಸೇರಿದಂತೆ ಅವರು ಮೂವತ್ತಕ್ಕೂ ಹೆಚ್ಚು ಇಂಗ್ಲಿಷ್ ಪುಸ್ತಕಗಳನ್ನು ಬರೆದಿದ್ದಾರೆ. ಅವು ಸಾಹಿತ್ಯ ತತ್ತ್ವ ಮತ್ತು ಇಂಡಿಯನ್ ಇಂಗ್ಲಿಷ್ ಸಾಹಿತ್ಯದ ವಿಸ್ತೃತವಾದ ಅಧ್ಯಯನಗಳನ್ನು ಒಳಗೊಂಡಿವೆ. 'ಕ್ರಿಯೇಷನ್ಸ್ ಅಂಡ್ ಟ್ರಾನ್ಸ್ ಕ್ರಿಯೇಷನ್ಸ್', 'ಕ್ರಿಟಿಕ್ ಆನ್ ದ ರನ್', 'ಐಡಿಯಾಸ್ ಅಂಡ್ ಇಮೇಜ್ಸ್' ಎಂಬ ಪುಸ್ತಕಗಳನ್ನು ಇಲ್ಲಿ ಹೆಸರಿಸಬಹುದು. ಇಂಗ್ಲಿಷ್ ಸಾಹಿತ್ಯದ ಅಧ್ಯಯನಕ್ಕೆ ನೆರವು ನೀಡುವ ಹಲವು ಗ್ರಂಥಗಳನ್ನು ಅವರು ಸಂಪಾದಿಸಿದ್ದಾರೆ. ಇಷ್ಟೇ ಮುಖ್ಯವಾಗಿ ಅವರು ಕನ್ನಡ ಸಾಹಿತ್ಯವನ್ನು ಇಡೀ ದೇಶಕ್ಕೆ ಪರಿಚಯ ಮಾಡಿಕೊಡುವ ನಿಟ್ಟಿನಲ್ಲಿ ಬರೆದಿರುವ ಹಲವು ಪುಸ್ತಕಗಳು ಅವರನ್ನು ಕನ್ನಡದ ವಕ್ತಾರರನ್ನಾಗಿಸಿವೆ. ಬೇಂದ್ರೆ, ಅ.ನ.ಕೃ., ಶಾಂತಿನಾಥ ದೇಸಾಯಿ, ಆದ್ಯ ರಂಗಾಚಾರ್ಯ(ಶ್ರೀರಂಗ) ಮುಂತಾದ ಲೇಖಕರನ್ನು ಕುರಿತ ಪುಸ್ತಕಗಳು ಬಹಳ ಅಚ್ಚುಕಟ್ಟಾಗಿ ಪರಿಚಯ ಮತ್ತು ವಿಶ್ಲೇಷಣೆಗಳಿಗೆ ಸೀಮಿತವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿರುವ 'ಎಸ್ಸೇಸ್ ಆನ್ ಮಾಡರ್ನ್ ಕನ್ನಡ ಲಿಟ್ರೇಚರ್' ಎಂಬ ಪುಸ್ತಕ ಬಹು ಮಟ್ಟಿಗೆ ಆ